

## ಪ್ರಸಾದ ಇಷ್ಟ

ಬೇಸಿಗೆ ರಜೆಗೆಂದು ನಮ್ಮನೆಗೆ ಬಂದಿದ್ದ ಮಕ್ಕಳೆಲ್ಲರೂ ಸಂಜೆ ಅಂಗಳದಲ್ಲಿ ಆಟವಾಡುತ್ತಿದ್ದರು. ಅದಕ್ಕೆ ತಣ್ಣೀರು ಎರಚುವಂತೆ ಗುಡುಗು ಸಹಿತ ಮಳೆ ಶುರುವಾಯಿತು. ಮಕ್ಕಳೆಲ್ಲ ಮನೆ ಸೇರಿಕೊಂಡರು. ಅಜ್ಜಿ ಗುಡುಗು–ಮಳೆಗೆ ಹಿಡಿ ಶಾಪ ಹಾಕುತ್ತ, 'ಮಕ್ಕಳೇ, ಎಲ್ಲರೂ ನಿಮಗೆ ಇಷ್ಟವಾದ ದೇವರ ಸ್ಮರಣೆ ಮಾಡಿ, ಮಳೆ ಕಡಿಮೆ ಆಗುತ್ತದೆ' ಎಂದರು. ಅರ್ಧ ತಾಸಿನಲ್ಲಿ ಮಳೆಯ ಆರ್ಭಟ ಕಡಿಮೆ ಆಯಿತು. 'ಯಾರು ಯಾವ ಯಾವ ದೇವರಲ್ಲಿ ಪ್ರಾರ್ಥನೆ ಮಾಡಿದ್ರಿ?' ಎಂದರು ಅಜ್ಜಿ. ಒಬ್ಬೊಬ್ಬರು ತಮ್ಮ ಇಷ್ಟದ ದೇವರುಗಳ ಹೆಸರನ್ನು ಹೇಳಿದರು. ರೋಹಿತ್ ಮಾತ್ರ 'ಸತ್ಯನಾರಾಯಣ... ತಿರುಪತಿ ವೆಂಕಟರಮಣ...' ಅಂತ ಅವೇ ಎರಡು ಹೆಸರನ್ನು ಮತ್ತೆ ಮತ್ತೆ ಹೇಳುತ್ತಿದ್ದ. 'ಅದ್ಯಾಕೊ, ಪದೇ ಪದೇ ಅದೇ ದೇವರ ಹೆಸರು ಹೇಳುತ್ತಿಯಲ್ಲ?' ಎಂದು ಅಜ್ಜಿ ಪ್ರಶ್ನಿಸಿದಾಗ, 'ಸತ್ಯನಾರಾಯಣ ಸ್ವಾಮಿಯ ಪ್ರಸಾದ, ತಿರುಪತಿ ಲಡ್ಡು ಅಂದ್ರೆ ಬಹಳ ಇಷ್ಟ' ಅಂದ.

**ನಗರ ಗುರುದೇವ ಭಂಡಾರ್ಕರ್**

## ಐಡೆಂಟಿಟಿ ಕಾರ್ಡ್

ದಕ್ಷಿಣದ ಕಾಶಿ ಎಂದೇ ಪ್ರಸಿದ್ಧವಾಗಿರುವ ದೇವಾಲಯದಲ್ಲಿ ದೇವರ ದರ್ಶನಕ್ಕೆಂದು ಸಾಲಿನಲ್ಲಿ ನಿಂತಿದ್ದೆ. ವಿಶೇಷ ದಿನವಾದ್ದರಿಂದ ಬಹಳ ಜನ ಸೇರಿದ್ದರು. ಸಾಲು ಮುಂದೆ ಸಾಗದೇ ನಿಂತು ಬಿಟ್ಟಿತ್ತು. ಆಗ ನನ್ನ ಸ್ನೇಹಿತ ತಮ್ಮ ಐಎಎಸ್ ಮಗನಿಗೆ 'ಇಲ್ಲಿನ ಸಿಬ್ಬಂದಿಗೆ ನಿನ್ನ ಐಡೆಂಟಿಟಿ ಕಾರ್ಡ್ ತೋರಿಸಿದರೆ ನೇರ ದರ್ಶನಕ್ಕೆ ಹೋಗಬಹುದು' ಎಂದ. ಆಗ ಅವರ ಮಗ 'ಸಿಬ್ಬಂದಿಗೆ ತೋರಿಸಿದರೆ ಬೇಗ ದರ್ಶನ ಸಿಗಬಹುದು. ಆದರೆ ದೇವರಿಗೆ ಕಾರ್ಡ್ ತೋರಿಸಿದರೆ ಬೇಗ ಬೇಡಿಕೆ ಈಡೇರುವುದೇ?' ಎಂದ.

**ಹಾಡ್ಯ ಬಿ. ಜಯಾನಂದ**

